**ದಿನಾಂಕ: 22.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. ವಿ ಬಿ ಕೆ . ವಕೀಲರಿಂದ:**

ನಾನು ಈ ಪ್ರಕರಣದಲ್ಲಿ ಅರ್ಜಿದಾರ ಇರುತ್ತೇನೆ. ನನ್ನ ಸತ್ಯಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ನಾನು ಈ ಕೆಳಗಿನ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಅವುಗಳನ್ನು ಕೆಳಗಿನಂತೆ ಗುರುತಿಸಲಾಗಿರುತ್ತದೆ.**

| | |
|---|---|
| **ನಿಪಿ: 01** | ಮುಖ್ಯ ಅಧಿಕಾರಿಗಳು, ಪುರಸಭೆ ಬನ್ನೂರು ನೀಡಿರುವ ಅಲಭ್ಯ ಪ್ರಮಾಣ ಪತ್ರ |
| **ನಿಪಿ: 02 ಮತ್ತು 03** | ಪತ್ರಿಕಾ ಪ್ರಕಟಣೆಗಳು |
| **ನಿಪಿ: 04** | ಅರ್ಜಿದಾರರ ಆಧಾರ್ ಕಾರ್ಡನ ನೋಟರೈಸ್ಡ್ ಪ್ರತಿಗಳು |
| **ನಿಪಿ: 05** | ನೋಟರೈಸ್ಡ್ ವಂಶವೃಕ್ಷ |

ನನ್ನ ತಾಯಿಯಾದ ಹಾಜಿರಾ ಬಾನು ಕೋಂ ಲೇ.ಬಡೇಮಿಯಾ ರವರು ದಿನಾಂಕ: **15.08.2018** ರಂದು ತಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಬನ್ನೂರು ಟೌನ್ ನ #352, ಕೆ ಇ ಬಿ ರೋಡ್, ವಾರ್ಡ್ ನಂ.21, ಮದೀನ ಮೊಹಲ್ಲಾದಲ್ಲಿ ಮರಣ ಹೊಂದಿರುತ್ತಾರೆ. ಸದರಿ ನನ್ನ ತಾಯಿಯ ಮರಣ ಪ್ರಮಾಣ ಪತ್ರವು ಪೌತಿ ಖಾತೆ ಮಾಡಿಸಿಕೊಳ್ಳುವ ಸಲುವಾಗಿ ಬೇಕಾಗಿದೆ. ಆದ ಕಾರಣ ನನ್ನ ತಾಯಿಯ ಮರಣವನ್ನು ನೋಂದಣಿ ಮಾಡಿಸಲು ಹಾಗೂ ಈ ಬಗ್ಗೆ ಪ್ರಮಾಣ ಪತ್ರವನ್ನು ಎದುರುದಾರರಿಂದ ಕೊಡಿಸಲು ಆದೇಶಿಸುವಂತೆ ಕೋರುತ್ತೇನೆ.

**<u>ಪಾಟೀ ಸವಾಲುಃ ಎದುರುದಾರರ ಪರವಾಗಿಃ</u>**

ಎದುರುದಾರರು ಏಕಪಕ್ಷೀಯ ಇದ್ದು, ಪಾಟೀ ಸವಾಲು ಇರುವುದಿಲ್ಲವೆಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**( ಸಚಿನ್.ಹೆಚ್.ಆರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ., ತಿ.ನರಸೀಪುರ.